ಮಾಡಿದ್ದೀರಾ? ಆವಾಗ ಇಡೀ ರಾಜ್ಯಕ್ಕೆ ಬೆಂಗಳೂರು ಮಹಾಜನತೆಗೆ ಈ ಬಗ್ಗೆ ಒಂದು ಮೆಸೇಜ್ ಹೋಗುತ್ತದೆ. ಏನಾದರೂ ಪ್ರಯತ್ನ ಮಾಡುತ್ತಿದ್ದೀರಾ ಅದನ್ನು ಹೇಳಿ.

ಶ್ರೀ ಧರ್ಮಸಿಂಗ್: ಅರ್ಕಾವತಿ ಲೇಔಟಿನಲ್ಲಿ 20 ಸಾವಿರ ನಿವೇಶನಗಳನ್ನು ಹಂಚುವಂತಹ ರೀತಿಯಲ್ಲಿ ಬಿಡಿಎ ಪ್ಲಾನ್ ತಯಾರು ಮಾಡಿತ್ತು. ಈಗ ಒಂದು ಕೋರ್ಟಿನಿಂದ ಬಂದಿದೆ. ಒಟ್ಟಾರೆ ಬೆಂಗಳೂರು ನಗರದ ಜನರಿಗೆ 50 ಸಾವಿರ ಸೈಟುಗಳನ್ನು ಕೊಡತಕ್ಕಂತಹ ರೀತಿಯಲ್ಲಿ ಬೇರೆ ಕಡೆಯಲ್ಲೂ ಕೂಡ ಜಮೀನು ವಶಪಡಿಸಿಕೊಳ್ಳಬೇಕು. ಆ ಜಮೀನನ್ನು ಎಲ್ಲಿ ವಶಪಡಿಸಿಕೊಳ್ಳುತ್ತೇವೆ ಎಂಬುದನ್ನು ನಾನು ಹೇಳುವುದಿಲ್ಲ. ಏಕೆಂದರೆ ಅದರ ಬಗ್ಗೆ ಬೇರೆ ಬೇರೆ ಶಕ್ತಿಗಳು ಬರುತ್ತವೆ. 50 ಸಾವಿರ ನಿವೇಶನಗಳನ್ನು ಹಂಚತಕ್ಕಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಅಧ್ಯಕ್ಷರು: ಈಗಾಗಲೇ ಪ್ರಶ್ನೋತ್ತರ 12 ಗಂಟೆಗೆ ಮುಗಿಯಬೇಕಾಗಿತ್ತು. ಈಗಾಗಲೇ 12–26 ಗಂಟೆಯಾಯಿತು. ಇನ್ನು 3 ಪ್ರಶ್ನೆಗಳು ಇವೆ. ನಾಳೆಯಿಂದ ಪ್ರಶ್ನೋತ್ತರವನ್ನು 1 ಗಂಟೆಗಿಂತ ಜಾಸ್ತಿ ಮಾಡುವುದಿಲ್ಲ. ಅದಕ್ಕಾಗಿ ಎಲ್ಲರೂ ದಯಮಾಡಿ ಸಹಕರಿಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಿಮ್ಮ ಸಹಕಾರದಿಂದ ಎಷ್ಟು ಗಂಭೀರವಾದ ವಿಷಯಗಳಿಗೆ ಪರಿಹಾರ ಸಿಗುತ್ತಿದೆ. ಬಿಡಿಎ ಬಗ್ಗೆ ಚರ್ಚೆಗೆ ಸುಮಾರು 15 ನಿಮಿಷವಾಯಿತು. ಅನೇಕ ವಿಷಯಗಳೂ ಹೊರಗೆ ಬಂದವು. ಇನ್ನು 2–2 ನಿಮಿಷಗಳಲ್ಲಿ ಮುಗಿಸೋಣ.

ಅಧ್ಯಕ್ಷರು: ಪ್ರಶ್ನೋತ್ತರವನ್ನು ಒಂದು ಗಂಟೆಯ ನಂತರ ನಡೆಸುವುದಕ್ಕಾಗುವುದಿಲ್ಲ. ನಾಳೆಯಿಂದ ಎಲ್ಲರೂ ದಯಮಾಡಿ ಸಹಕರಿಸಬೇಕು. ಮಾನ್ಯ ಡಿ.ಎನ್ ಜೀವರಾಜ್‌ರವರು ತಾವು ಪ್ರಶ್ನೆಯನ್ನು ಕೇಳಿ.

ಶೃಂಗೇರಿ ಕೊಪ್ಪ ಹಾಗೂ ಎನ್ ಆರ್‌ಪುರ ತಾಲ್ಲೂಕುಗಳಲ್ಲಿ ಏತನೀರಾವರಿ ಯೋಜನೆಗಳು

343(4285) ಶ್ರೀ ಜೀವರಾಜ್ ಡಿ.ಎನ್ (ಶೃಂಗೇರಿ)– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ?

ಅ) ಶೃಂಗೇರಿ ಕೊಪ್ಪ ಹಾಗೂ ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಸರ್ಕಾರದಿಂದ ಕೈಗೊಂಡ ಏತನೀರಾವರಿ ಯೋಜನೆಗಳು ಯಾವುವು;

ಆ) ಇವುಗಳಲ್ಲಿ ಅಪೂರ್ಣಗೊಂಡ ಹಾಗೂ ಕಾರ್ಯನಿರ್ವಹಿಸದೇ ಇರುವ ಯೋಜನೆಗಳಾವುವು ಹಾಗೂ ಯಾವ ಕಾರಣದಿಂದ ಕಾರ್ಯ ನಿರ್ವಹಿಸುತ್ತಿಲ್ಲ;

ಇ) ನರಸಿಂಹರಾಜಪುರ ತಾಲ್ಲೂಕಿನ ಹೊನ್ನೆ ಕುಡಿಗೆ ಏತನೀರಾವರಿ ಕಾಮಗಾರಿ ಯಾವ ಹಂತದಲ್ಲಿದೆ; ಪೂರ್ಣಗೊಳಿಸಲು ಬೇಕಾದ ಮೊತ್ತ ಎಷ್ಟು;

ಈ) ಕಡಿಹಿನಬೈಲು ಏತನೀರಾವರಿ ಯೋಜನೆಯ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)–

ಅ) ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ, ಕೊಪ್ಪ ಹಾಗೂ ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಕೆಳಕಂಡ ಏತನೀರಾವರಿ ಯೋಜನೆಗಳು ಇದೆ.

ಕ್ರ.ಸಂ	ತಾಲ್ಲೂಕು	ಯೋಜನೆಯ ಹೆಸರು
1.	ಶೃಂಗೇರಿ	ನಮ್ಮೂರ ಏತನೀರಾವರಿ ಯೋಜನೆ
2.	ಕೊಪ್ಪ	1. ಬೊಮ್ಮಲಾಪುರ ಏತನೀರಾವರಿ ಯೋಜನೆ
		2. ಬಂಡಿಗಡಿ ಏತನೀರಾವರಿ ಯೋಜನೆ
3.	ಎನ್.ಆರ್. ಪುರ	ಕೆ.ಕಣಬೂರು ಏತನೀರಾವರಿ ಯೋಜನೆ

ಆ) ಬೊಮ್ಮಲಾಪುರ ಏತನೀರಾವರಿ ಯೋಜನೆಯು ಅಪೂರ್ಣ ಗೊಂಡಿರುತ್ತದೆ ಹಾಗೂ ಕಾರ್ಯನಿರ್ವಹಿಸದೆ ಇರುವ ಕಾಮಗಾರಿಗಳೂ ಯಾವುದೂ ಇರುವುದಿಲ್ಲ.

ಇ) ಹೊನ್ನೆಕುಡಿಗೆ ಏತನೀರಾವರಿ ಯೋಜನೆಯ ಕಾಮಗಾರಿಯು ಇನ್ನೂ ಪರಿಶೀಲನಾ ಹಂತದಲ್ಲಿದೆ ಇದರ ಅಂದಾಜು ಮೊತ್ತ ರೂ.200.00 ಲಕ್ಷವಾಗುವುದೆಂದು ಅಂದಾಜಿಸಲಾಗಿದೆ.

ಈ) ಈ ಕಾಮಗಾರಿಯ 6.90 ಕೋಟಿ ರೂಗಳ ಅಂದಾಜಿಗೆ ದಿ.10.05.2005ರಲ್ಲಿ ಮಂಜೂರಾತಿ ನೀಡಲಾಗಿದೆ. ಈ ಯೋಜನೆಯ ಕಾಮಗಾರಿಯನ್ನು ಸಧ್ಯದಲ್ಲಿಯೇ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ.ಎನ್ ಜೀವರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಶೃಂಗೇರಿ, ಕೊಪ್ಪ, ಮತ್ತು ಎನ್.ಆರ್.ಪುರ 3 ತಾಲ್ಲೂಕುಗಳಲ್ಲಿ ಏತನೀರಾವರಿ ಯೋಜನೆಗಳೂ ಎಷ್ಟು ಇವೆ ಎಂದರೆ 4 ಯೋಜನೆಗಳು ಇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆ 4 ಯೋಜನೆಗಳಲ್ಲಿ ಒಂದು ಯೋಜನೆಯು ಇನ್ನೂ ಕಾರ್ಯಾರಂಭ ಮಾಡಿಲ್ಲವೆಂದು ಉತ್ತರವನ್ನು ತಲುಪಿಸಿದ್ದಾರೆ. ಆದರೆ ಸಚಿವರಿಗೆ ಮಾಹಿತಿಯ ಕೊರತೆ ಇದೆಯೆಂದು ನಾನು ಭಾವಿಸಿದ್ದೇನೆ. ಅದರಲ್ಲಿ ಒಂದೇ ಒಂದು ಏತನೀರಾವರಿ ಕಾರ್ಯಾರಂಭ ಮಾಡಿರುವುದನ್ನು ಬಿಟ್ಟರೆ ಇನ್ನು ಉಳಿದ ಏತನೀರಾವರಿಗಳು ದಿನ ಬೆಳಿಗ್ಗೆ ಕೆಲಸವನ್ನು ಮಾಡುತ್ತವೆ, ಮಧ್ಯಾಹ್ನ ರಿಪೇರಿಯ ಹಂತವನ್ನು ತಲುಪುತ್ತವೆ. ಹಾಗಾಗಿ ಕಾಮಗಾರಿಗಳು ಸರಿಯಾದ ರೀತಿಯಲ್ಲಿ ನಡೆದಿಲ್ಲ. ಅದು ಸರಿಯಾದ ರೀತಿಯಲ್ಲಿ ನಡೆಯಬೇಕೆಂದು ನಾನು ಕೇಳುತ್ತೇನೆ. ಹೊನ್ನೆಕುಡಿಗೆ ಏತನೀರಾವರಿ ಎನ್ನುವಂತಹ ಏತನೀರಾವರಿಯನ್ನು ಮಾಡಬೇಕೆಂದು ಹೇಳಿ 25 ವರ್ಷಗಳಿಂದ ಜನರು ಹೋರಾಟವನ್ನು ಮಾಡುತ್ತಿದ್ದಾರೆ. ಸ್ವಾತಂತ್ರ್ಯಕ್ಕಿಂತ ಮುಂಚೆ ನರಸಿಂಹರಾಜಪುರದಲ್ಲಿ ರೈಲು ಬರುತ್ತಿತ್ತು. ಎನ್.ಆರ್.ಪುರದಲ್ಲಿ ಭದ್ರಾ ಮತ್ತು ತುಂಗಾ ಎರಡು ನದಿಗಳೂ ಹರಿದರೂ ಕೂಡ ಎರಡಕ್ಕೂ ಒಂದೊಂದು ಡ್ಯಾಂನ್ನು ಕಟ್ಟಿ ಎನ್.ಆರ್.ಪುರ ಮುಕ್ಕಾಲು ಭಾಗ ಮುಳುಗಡೆ ಆಗಿಹೋಯಿತು. ಆದರೆ ಈ ಮುಳುಗಡೆಯಿಂದ ನಾವು ಒಂದು ಲಿಫ್ಟ್ ಇರಿಗೇಷನನ್ನು ಕೇಳಿದರೆ 2 ಕೋಟಿ ರೂಪಾಯಿಗಳು ಖರ್ಚು ಆಗುತ್ತದೆ ಎನ್ನುವಂಥಹ ಕಾರಣಕ್ಕಾಗಿ ಅದು ಪೆಂಡಿಂಗ್ ಇದೆ. 2 ಕೋಟಿ ರೂ.ಗಳ ಒಂದು ಸಣ್ಣ ಲಿಫ್ಟ್ ಇರಿಗೇಷನ್‌ಗೆ 25 ವರ್ಷಗಳ ಕಾಲಾವಕಾಶ ಏತಕ್ಕಗಿ ಬೇಕಾಗಿದೆ? ಸರ್ಕಾರಕ್ಕೆ ಇಚ್ಚಾಶಕ್ತಿಯ ಕೊರತೆ ಇದೆಯಾ? ಎಂದು ನಾನು ಕೇಳುತ್ತಿದ್ದೇನೆ. ಕಡುಹೀನ ಬೈಲು ಏತನೀರಾವರಿ ಯೊಜನೆಗೆ 1 ಕೋಟಿ 20 ಲಕ್ಷ ರೂಪಾಯಿಗಳನ್ನು ಮೊನ್ನೆ ಬಜೆಟ್‌ನಲ್ಲಿ ಪ್ರಾವಿಷನ್ ಇಟ್ಟಿದ್ದಾರೆ. ಆದರೂ ಕೂಡ ಅದಕ್ಕೆ ಟೆಂಡರ್ ಕರೆಯಲಿಲ್ಲ. ಅದು ಇನ್ನು ಕಾರ್ಯಾರಂಭ ಆಗುವಂಥಹ ಸ್ಥಿತಿಯನ್ನು ಕಾಣಲಿಲ್ಲ. 2003ನೇ ಇಸವಿಯಲ್ಲಿ ಅದಕ್ಕೆ ಶಂಕು ಸ್ಥಾಪನೆಯಾಗಿದೆ. ಮೊನ್ನೆ ಅದಕ್ಕೆ ಹಣವನ್ನು ಇಡುವಂತಹ ಕೆಲಸ ನಡೆದಿದೆ. ಎನ್.ಆರ್.ಪುರ ಕೊಪ್ಪ, ಶೃಂಗೇರಿಯಲ್ಲಿ ಎರಡು ಕಡೆಗಳಲ್ಲಿ ಭದ್ರಾ ಮತ್ತು ತುಂಗಾ ನದಿಗಳು ಹರಿಯುತ್ತದೆ. ಅದು ಎರಡು ಕಡೆ ನದಿ ಹರಿದರೂ ಕೂಡ ನಮ್ಮ ಹತ್ತಿರ ಒಂದು

ಲಿಫ್ಟ್ ಇರಿಗೇಷನ್‌ನ್ನು ಸರಿಯಾದ ರೀತಿಯಲ್ಲಿ ಮಾಡಿಕೊಳ್ಳುವುದಕ್ಕಾಗಲಿಲ್ಲ. ಸರ್ಕಾರ ದಯಮಾಡಿ ಇದರ ಬಗ್ಗೆ ಗಮನ ಹರಿಸಬೇಕು. ನಮ್ಮ ಹೊನ್ನೆಕುಡಿಗೆ, ಕಡುಹೀನ ಬೈಲು ಏತನೀರಾವರಿಗಳ ಜೊತೆಗೆ ಕಾರ್ಯಾರಂಭ ಮಾಡಿದಂತಹ ನಾಲ್ಕು ಏನು ಲಿಫ್ಟ್ ಇರಿಗೇಷನ್‌ಗಳು ಇವೆ, ಅವುಗಳನ್ನು ಸರಿಯಾದ ರೀತಿಯಲ್ಲಿ ಮಾಡಿಕೊಡಬೇಕೆಂದು ನಾನು ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನವನ್ನು ಕೂಡ ಕಳುಹಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರಿ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿರತಕ್ಕಂತಹ ಮಾಹಿತಿ ಪ್ರಕಾರ ಶೃಂಗೇರಿಯ ನೆಮ್ಮೂರ್ ಏತನೀರಾವರಿ ಯೋಜನೆ ಪೂರ್ಣಗೊಂಡಿದೆ ಎಂದು ಮಾಹಿತಿ ಇದೆ, ಅದು ಸರಿಯಲ್ಲವೆಂದು ತಾವು ಬರೆದು ಕೊಟ್ಟರೆ ನಾನು ಅವರಿಗೆ ತಪ್ಪು ಮಾಹಿತಿಯನ್ನು ಏಕೆ ಕೊಟ್ಟಿರುವಿರೆಂದು ಕೇಳುತ್ತೇನೆ. ಕೊಪ್ಪದ ಬೊಮ್ಮಲಪುರದ ಏತನೀರಾವರಿ ಅಪೂರ್ಣ ಗೊಂಡಿರುವುದು ನಿಜ. ಇದಕ್ಕೆ ಬೇರೆ ಕಾರಣಗಳಿವೆ. ಏಕೆಂದರೆ feasibility ದೃಷ್ಟಿಯಿಂದ ಇದು ನಿಂತು ಹೋಗಿದೆ. ಅದನ್ನು ಕೂಡ ಪುನರ್ ಪರಿಶೀಲನೆ ಮಾಡಿ ಯಾವ ರೀತಿಯಾಗಿ ಇದನ್ನು ತೆಗೆದು ಕೊಳ್ಳಬೇಕೆಂಬುದನ್ನು ನೋಡುತ್ತೇವೆ. ಇನ್ನೊಂದು ಕೊಪ್ಪದಲ್ಲಿರುವ ಬಂಡಿಗಡಿ ಏತನೀರಾವರಿ ಯೋಜನೆ ಪೂರ್ಣಗೊಂಡಿದೆ. ಎನ್.ಆರ್.ಪುರದಲ್ಲಿರುವ ಕೆ.ಕಣಬುರು ಏತನೀರಾವರಿ ಯೋಜನೆ ಕೂಡ ಪೂರ್ಣಗೊಂಡಿದೆ. ಈ 4 ರಲ್ಲಿ ಮೂರು ಪೂರ್ಣಗೊಂಡಿದೆ, ಒಂದು ಮಾತ್ರ ಅಪೂರ್ಣಗೊಂಡಿದೆ. ತಾವು ಈಗಾಗಲೇ ಹೇಳಿದ ಹಾಗೆ ಕಡುಹಿನಬೈಲು ಏತನೀರಾವರಿ ಯೋಜನೆಗೆ ದಿನಾಂಕ: 10.05.2005ರಲ್ಲಿ ಸುಮಾರು 6.90 ಕೋಟಿ ರೂಪಾಯಿಗಳು ಮಂಜೂರು ಮಾಡಿ ಈ ಕೆಲಸ ಪ್ರಾರಂಭ ಮಾಡಬೇಕೆಂದು ಹೇಳಿದ್ದೇವೆ. ಎರಡು ಕೋಟಿ ರೂಪಾಯಿಗಳ ಹಣ ಸರ್ಕಾರದಲ್ಲಿ ಇಲ್ಲವೇ ಎಂದು ನೀವು ಹೇಳಿದಿರಿ. 6.90 ಕೋಟಿ ರೂಪಾಯಿಗಳಲ್ಲಿ ಹಣವನ್ನು ಕೊಟ್ಟು ಮಂಜೂರಾತಿ ನೀಡಿ ಕೆಲಸ ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ. ಅದಕ್ಕೆ ನೀವು ನಮಗೆ ಶಹಬಾಸ್‌ಗಿರಿಯನ್ನು ಕೊಡುವುದನ್ನು ಬಿಟ್ಟು ಸರ್ಕಾರದಲ್ಲಿ ಹಣವಿಲ್ಲವೇ ಅಂತ ತಾವು ಕೇಳತ್ತಿದ್ದೀರಿ. ಟೆಂಡರ್ ಕಾಲ್‌ಫರ್ ಮಾಡಿ ಈಗಾಗಲೇ ಇದರ ಬಗ್ಗೆ ಮಂಜೂರಾತಿಯನ್ನು ಕೂಡ ಕೊಡಲಾಗಿದೆ. ಇದರ ಜೊತೆಗೆ ಹೊನ್ನೆಕುಡಿಗೆ

ಏತನೀರಾವರಿಗೆ 2 ಕೋಟಿ ರೂಪಾಯಿಯನ್ನು ನೀಡಲಾಗಿದ್ದು ಇದೆಲ್ಲವನ್ನು ಕೂಡ ಏಕಕಾಲಕ್ಕೆ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಆದರೆ ಒಂದು ದೊಡ್ಡ ಯೋಜನೆಯನ್ನು ಈಗ ತೆಗೆದುಕೊಂಡಿದ್ದೇವೆ. ಉಳಿದ ಅಪೂರ್ಣವಾಗಿರುವ ಯೋಜನೆಗಳನ್ನು ಕೂಡ ತೆಗೆದುಕೊಳ್ಳುವ ಪ್ರಯತ್ನವನ್ನು ಖಂಡಿತವಾಗಿ ಮಾಡುತ್ತೇವೆ. ಏಕೆಂದರೆ ಆ ಭಾಗದಲ್ಲಿ ಏತನೀರಾವರಿ ಯೋಜನೆ ಅಥವಾ ಸಣ್ಣ ನೀರಾವರಿ ಮಾತ್ರ ಸಾಧ್ಯ. ಬೇರೆ ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೆ ತಾವು ಹೇಳತಕ್ಕಂತಹ ಯಾವುದೇ ಯೋಜನೆ ಇರಲಿ, ಅದನ್ನು ಖಂಡಿತವಾಗಿ ನಾನು ಪರಿಶೀಲನೆ ಮಾಡಿ ಎಲ್ಲೆಲ್ಲಿ ಎಕನಾಮಿಕಲಿ feasibility ಇದೆ ಅಂಥಾದ್ದನ್ನು ಖಂಡಿತವಾಗಿ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಎನ್. ಜೀವರಾಜ್: ನಾನು ಹೇಳಿದ್ದನ್ನು ತಾವು ಅಪಾರ್ಥ ಮಾಡಿಕೊಂಡಿರಿ, ನಾನು ಕೇಳಿದ್ದು ಹೊನ್ನೆಕುಡಿ ಏತನೀರಾವರಿಗೆ ಎರಡು ಕೋಟಿ ರೂಪಾಯಿಗಳೂ ಖರ್ಚಾಗುತ್ತದೆಂದು ಹೇಳಿದೆ. ಅದು ಕಡುಹೀನ ಬೈಲಿಗೆ ಅಲ್ಲ. ಕಡುಹೀನಬೈಲಿನ ಏತನೀರಾವರಿ ತಾವು ಕೊಟ್ಟಿದ್ದಕ್ಕೆ ನಿಮ್ಮ ಕಛೇರಿಗೆ ಬಂದು ನಾನು ಧನ್ಯವಾದಗಳನ್ನು ತಿಳಿಸಿದ್ದೇನೆ. ಆದರೆ ಟೆಂಡರ್ ಆಗದೇ ಕೆಲಸ ಮತ್ತೆ ನಿಲ್ಲುತ್ತದೆಂದು ತಮ್ಮ ಬಳಿ ಕೇಳುತ್ತಿದ್ದೇನೆ. ಹೊನ್ನೆಕುಡಿಗೆ ಏತನೀರಾವರಿಗೆ 25 ವರ್ಷಗಳಿಂದ ಹೋರಾಟವಾಗುತ್ತಿದೆ. ಅದಕ್ಕೆ ಬಹಳ ಕಡಿಮೆ ಹಣವಿದೆ, ತಾವು ದಯಮಾಡಿ ಅದನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: . ಇದಕ್ಕೆ feasibility ರಿಪೋರ್ಟ್ ತರಿಸಿಕೊಂಡು ಯಾವುದಾದರೂ ಒಂದು ಯೋಜನೆಯಲ್ಲಿ ತೆಗೆದುಕೊಳ್ಳುತ್ತೇನೆ. ಇದು ಏನಾಗಿದೆಯೆಂದರೆ, ಆಫ್‌ಕೋರ್ಸ ಇದು ಕೃಷ್ಣ ಬೇಸಿನ್‌ನಲ್ಲಿ ಬರುವುದರಿಂದ ನಾವು ಯಾವುದಾದರೂ ಒಂದು ಯೋಜನೆಯಲ್ಲಿ ಮಾಡಬಹುದು. ಆದರೆ ಈ ಸಣ್ಣ ನೀರಾವರಿ ಯೋಜನೆಗೆ ವಿಶೇಷವಾಗಿ 2702 ಈ ಹೆಡ್‌ನಲ್ಲಿ ಹಣದ ಕೊರತೆ ಇದೆ. ನಬಾರ್ಡನಲ್ಲಿ ಕೂಡ ನಾವು ತೆಗೆದುಕೊಳ್ಳತಕ್ಕದ್ದು, ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥದ್ದು ಮಾಡಲಿಕ್ಕೆ ಬರುವುದಿಲ್ಲ. ಅದರೆ ಇದಕ್ಕೆ ವಿಶೇಷ ಹಣವೆಂದು 50 ಕೋಟಿ ರೂಪಾಯಿಗಳನ್ನು ಕೇಳೀದ್ದೇವೆ. ಬಹುಶಃ ಈ ಹಣ ಬಂದರೆ ಎಲ್ಲೆಲ್ಲಿ ಕಾವೇರಿ ಬೇಸಿನ್‌ನಲ್ಲಿ ಯಾವುದನ್ನು ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ.

ಕೃಷ್ಣ ಬೇಸಿನ್‌ನಲ್ಲಿ ವಿಶೇಷವಾಗಿ ಚಿಕ್ಕಮಗಳೂರು, ಶಿವಮೊಗ್ಗ, ಆ ಭಾಗಗಳಲ್ಲಿಯೂ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದನ್ನು ನಾನು ಮಾಡುತ್ತೇನೆ. ಈ ಎರಡು ಕೋಟಿ ರೂಪಾಯಿ ಹಣವನ್ನು ಇದಕ್ಕೆ ಒದಗಿಸಬೇಕೆಂದು ಹೇಳಿದ್ದೀರಿ. ಖಂಡಿತವಾಗಿ ನಬಾರ್ಡ್ ಯೋಜನೆಯಲ್ಲಿ ಇದು ಬರುತ್ತದೆಯೆಂದರೆ ಅದನ್ನು ಸೇರಿಸಿ, ಇದಕ್ಕೆ ಏನಾದರೂ ಒಂದು ಉಪಾಯ ಮಾಡುತ್ತೇನೆ.

344(4024)

ಶ್ರೀ ಎನ್.ಯೊಗೀಶ್ ಭಟ್: ಶ್ರೀಮತಿ ಶಕುಂತಲಾ ಶೆಟ್ಟಿಯವರ ಪ್ರಶ್ನೆಗೆ ಉತ್ತರಿಸಬೇಕು.

ಅಧ್ಯಕ್ಷರು: ಶಕುಂತಲಾ ಶೆಟ್ಟಿಯವರ ಪ್ರಶ್ನೆ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದೆ, ಈ ಕಾವೇರಿ ವಾಟರ್ ಡಿಸ್‌ಪ್ಯೂಟ್ ಇರುವುದರಿಂದ ಕೆಳಭಾಗದಲ್ಲಿರುವವರು ಅದನ್ನು ತಿರುವು ಮಾಡಬೇಕೆಂದು ಹೇಳುತ್ತಾರೆ. ನೀವು ಅದನ್ನು ತಿರುವಿದರೆ ದಕ್ಷಿಣ ಕನ್ನಡದ ಮಂಗಳೂರು ಹಾಗೂ ಉಡುಪಿಗೆ ತೊಂದರೆಯಾಗುತ್ತದೆನ್ನುವ ಮಾತು ಇದೆ. ಆದ್ದರಿಂದ ನಾವು ಅದರ ಬಗ್ಗೆ ಇಲ್ಲಿ ಚರ್ಚೆ ಮಾಡಿದರೆ ನಾಳೆ ಏನಾಗುತ್ತದೆಂದರೆ ನಿಮ್ಮಲ್ಲಿ ಎಕ್ಸೆಸ್ ವಾಟರ್ ಇದ್ದು ತಿರುವು ಬೇಕೆನ್ನುವವರು ಒಬ್ಬರು, ಬೇಡ ಎನ್ನುವವರು ಮತ್ತೊಬ್ಬರು ಎಂದು ಈ ಪ್ರಶ್ನೆ ಬರುತ್ತದೆಂದು ಇದನ್ನು ತಡೆಹಿಡಿಯಬೇಕೆಂದು ನಾವು ಹೇಳಿದ್ದೇವೆ.

ಶ್ರೀಮತಿ ಚಿ. ಶಕುಂತಲಾ ಶೆಟ್ಟಿ: ನಾವು ಚರ್ಚೆ ಮಾಡುವುದಿಲ್ಲ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜೀವ ನದಿಯಾದ ನೇತ್ರಾವತಿ ಜೀವನದಿಯನ್ನು ತಿರುವು ಮಾಡಿಸಿ ಘಟ್ಟದ ಮೇಲೆ ತರುವುದಕ್ಕೆ ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯ ಯಾವುದೇ ಶಾಸಕರು ಬಿಡುವುದಿಲ್ಲವೆಂದು ಖಡಾಖಂಡಿತವಾಗಿ ಹೇಳುತ್ತೇವೆ.

(ಗೊಂದಲ)

(ಅನೇಕ ಸದಸ್ಯರುಗಳೂ ಏಕಕಾಲದಲ್ಲಿ ಮಾತನಾಡಿದರು).

ಅಧ್ಯಕ್ಷರು: ಹೀಗೆ ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಇಷ್ಟು ವರ್ಷದಿಂದ ನೇತ್ರಾವತಿ ನದಿಯ ನೀರಿನ ಯೋಜನೆಯಾಗ ಬೇಕೆಂದು ನಾವು ಕಾಯುತ್ತಾ ಕುಳಿತ್ತಿದ್ದೇವೆ,